# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ:19 /2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2010–11ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಪ್ರಸ್ತಾವನೆಯಾಗಿರುವಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 'ವತಿಯಿಂದ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಕೋರಿ ಆದೇಶ ಹೊರಡಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ತಮ್ಮ ಪತ್ರದ ಸಂಖ್ಯೆ:ಬೆಂಅಪ್ರಾ/ಆಯು/154/2009–10 ದಿ:20/03/2010 ರಂತೆ ಕೋರಿದ್ದು, ವಿವರಗಳು ಕೆಳಕಂಡಂತಿದೆ;

1. ಬೆಂಗಳೂರಿನ 10 ಪ್ರಮುಖ ಸಂಚಾರಿ ಮಾರ್ಗಗಳನ್ನು ಉತ್ತಮಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 2010–11 ರಲ್ಲಿ ರೂ.1000 ಕೋಟಿ ವೆಚ್ಚ ಮಾಡಲಾಗುವುದು.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಗರದ 25 ಕೆರೆಗಳನ್ನು ಅಭಿವೃದ್ಧಿಪಡಿಸಲು ರೂ.200 ಕೋಟಿ ವಿನಿಯೋಗಿಸಲಾಗುವುದು
3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತುಗಳಲ್ಲಿ ಗುರುತಿಸುವ ಹತ್ತು ಸ್ಥಳಗಳಲ್ಲಿ ಬಹುಮಹಡಿ ವಾಹನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ.

ಆಯವ್ಯಯದಲ್ಲಿ ಪ್ರಸ್ತಾಪಿಸಿರುವ ಬೆಂಗಳೂರಿನ 10 ಪ್ರಮುಖ ಸಂಚಾರಿ ಮಾರ್ಗಗಳನ್ನು ಉತ್ತಮಪಡಿಸುವ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರವು ಕೆಳಕಂಡ ಅಂಶಗಳನ್ನು ಗಮನಕ್ಕೆ ತಂದು ಸೂಕ್ತ ಆದೇಶವನ್ನು ಹೊರಡಿಸಲು ಕೋರಿರುತ್ತದೆ.

ಬೆಂಗಳೂರಿನ ಹತ್ತು ಪ್ರಮುಖ ಸಂಚಾರಿ ಮಾರ್ಗಗಳು ಪ್ರಾಧಿಕಾರದ ಆಸ್ತಿಯಾಗಿರದೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧೀನದ ರಸ್ತೆಗಳಾಗಿರುತ್ತವೆ. ಆಯವ್ಯಯದಲ್ಲಿ ಪ್ರಸ್ತಾಪಿಸಿರುವಂತೆ ಅವುಗಳನ್ನು ಉತ್ತಮ ಪಡಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಬೇಕಾರುತ್ತದೆ. ಈ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ತಾನು ಗುರುತಿಸಿದ 10 ರಸ್ತೆಗಳನ್ನು ವರ್ಗಾವಣೆ ಮಾಡಲು ಸೂಕ್ತ ರಠಾವನ್ನು ಅಂಗೀಕರಿಸಿ ಕಳುಹಿಸುವಂತೆ ಸರ್ಕಾರವು ಪಾಲಿಕೆಗೆ ಸ್ಪಷ್ಟ ಆದೇಶವನ್ನು ನೀಡಿರುತ್ತದೆ.

ವಾಹನ ನಿಲುಗಡೆ ಸಮಸ್ಯೆಯವನ್ನು ಪರಿಹರಿಸುವ ನಿಟ್ಟಿನಲ್ಲಿ ಬಹುಮಹಡಿ ವಾಹನ ನಿಲುಗಡೆ ಸಮುಚ್ಚಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಾಹನ ನಿಲುಗಡೆಗೆ ಸಮುಚ್ಚಯಗಳನ್ನು ನಿರ್ಮಿಸಬೇಕಾದ ಸ್ಥಳಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸಬೇಕಾಗಿದೆ. ವಾಹನ ನಿಲುಗಡೆ ಸಮುಚ್ಚಯ ನಿರ್ಮಾಣ ನಿವೇಶನಗಳನ್ನು ಗುರುತಿಸಿದ ನಂತರ ಅವುಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಬಗ್ಗೆ

ನಿರ್ಣಯವನ್ನು ಅಂಗೀಕರಿಸಿ, ಸರ್ಕಾರಕ್ಕೆ ಕಳುಹಿಸಿಕೊಟ್ಟ ನಂತರ ಅವುಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಾಧಿಕಾರಕ್ಕೆ ಸರ್ಕಾರವು ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ದಿ:27/04/2010 ರಂದು ನಡೆದ ಅನೌಪಚಾರಿಕ ಸಭೆಯಲ್ಲಿ ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟೆಂಡರ್ ಕರೆದಿರುವ ಯೋಜನೆಗಳನ್ನು ಹೊರತುಪಡಿಸಿ 10 ಸಂಚಾರಿ ಮಾರ್ಗಗಳನ್ನು ಉತ್ತಮಪಡಿಸಲು, 25 ಕೆರೆಗಳನ್ನು ಅಭಿವೃದ್ಧಿಪಡಿಸಲು ಹಾಗೂ ವಾಹನ ನಿಲುಗಡೆ ಸಮುಚ್ಚಯವನ್ನು ನಿರ್ಮಾಣ ಮಾಡಲು 10 ಪ್ರಮುಖ ಸ್ಥಳಗಳನ್ನು ಗುರುತಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವಂತೆ ನೀಡಿದ ಸೂಚನೆ ಮೇರೆಗೆ ಈ ಕೆಳಕಂಡಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುಪರ್ಧಿಗೆ ಹಸ್ತಾಂತರಿಸಲು ಅಭಿಪ್ರಾಯಪಡಲಾಯಿತು.

**ಸಂಚಾರಿ ಮಾರ್ಗಗಳ ಅಭಿವೃದ್ಧಿ:**

1. ಮೇಖ್ರೀ ಸರ್ಕಲ್‌ನಿಂದ ಸರ್.ಸಿ.ವಿ.ರಾಮನ್ ನಗರ ರಸ್ತೆ, ಸಿ.ಎನ್.ಆರ್.ರಾವ್ ವೃತ್ತ, ತುಮಕೂರು ರಸ್ತೆ ಮಾರ್ಗವಾಗಿ ಹೆಸರುಘಟ್ಟ ರಸ್ತೆಯನ್ನು ಬಿಬಿಎಂಪಿ ಪರಿಮಿತಿ ವರೆಗೆ R.M.P–2015 ರಂತೆ ಅಗಲೀಕರಿಸುವುದು (ಆಯ್ದ ಭಾಗಗಳಲ್ಲಿ), ಜಂಕ್ಷನ್‌ಗಳಲ್ಲಿ ಗ್ರೇಡ್ ಸಪ್ರೇಟರ್‌ಗಳನ್ನು ನಿರ್ಮಿಸುವುದು.
2. ಸಿರ್ಸಿ ವೃತ್ತದಿಂದ ಚಾಮರಾಜಪೇಟೆ, ಮಿನರ್ವ ವೃತ್ತ, ಡೈರಿ ಸರ್ಕಲ್ ಮಾರ್ಗವಾಗಿ ಆಗ್ರ ಲೇಕ್ ವರೆಗೆ ಹಾಗೂ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ.
3. ಕಬ್ಬನ್ ರಸ್ತೆಯಿಂದ ಬುದ್ಧ ವಿಹಾರ್ ಮಾರ್ಗವಾಗಿ ರಿಂಗ್ ರಸ್ತೆಯವರೆಗೆ ಅಗಲೀಕರಣ ಹಾಗೂ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ.
4. ಹೇರೋ ಹಳ್ಳಿಯಿಂದ (ಮಾಗಡಿ ರಸ್ತೆ) ತುಮಕೂರು ರಸ್ತೆ ವರೆಗೆ ಅಗಲೀಕರಣ ಹಾಗೂ ಅಭಿವೃದ್ಧಿ.
5. ಮಾಗಡಿ ರಸ್ತೆಯಿಂದ ಮಲ್ಲತ್ತಹಳ್ಳಿ ಮಾರ್ಗವಾಗಿ ಮೈಸೂರು ರಸ್ತೆವರೆಗೆ ಅಗಲೀಕರಣ ಹಾಗೂ ಅಭಿವೃದ್ಧಿ.
6. ಬಾಲಬ್ರೂಹಿ (ಹೈಗ್ರೌಂಡ್ಸ್) ನಿಂದ ಹೆಬ್ಬಾಳ ಮೇಲುಸೇತುವೆ ವರೆಗೆ ಮೇಲು ಸೇತುವೆ ನಿರ್ಮಾಣ.
7. ಮೈಸೂರು ರಸ್ತೆ ಸಿರ್ಸಿ ವೃತ್ತದಿಂದ ಬಿ.ಹೆಚ್.ಇ.ಎಲ್ ವರೆಗೆ ಮೇಲುಸೇತುವೆ ನಿರ್ಮಾಣ.
8. ಹೊಸೂರು ರಸ್ತೆಯಿಂದ (ಚಂದಾಪುರದ ಬಳಿ) ಸರ್ಜಾಪುರದ ರಸ್ತೆ ವರ್ತೂರು ವೈಟ್‌ಫೀಲ್ಡ್ ಮುಖಾಂತರ NH-4 (ಕೋಡಿಹಳ್ಳಿ) ವರೆಗೆ ರಸ್ತೆಯನ್ನು ಅಗಲೀಕರಿಸುವುದು, ಜಂಕ್ಷನ್‌ಗಳನ್ನು ಅಭಿವೃದ್ಧಿಪಡಿಸುವುದು.
9. ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಮೈಸೂರು ರಸ್ತೆವರಗೆ ಓ.ಆರ್.ಆರ್. ರಸ್ತೆಯನ್ನು ಆರ್.ಎಂ.ಪಿ–2015 ರ ಪ್ರಕಾರ ಅಗಲೀಕರಣಗೊಳಿಸುವುದು, ಎಲಿವೇಟೆಡ್ ರಸ್ತೆಗಳನ್ನು ನಿರ್ಮಿಸುವುದು.
10. ಕನಕಪುರ ರಸ್ತೆಯಲ್ಲಿ Khoday Breverages ಮತ್ತು ಬಿ.ಸಿ.ಸಿ ಲೇ.ಔಟ್ ಜಂಕ್ಷನ್ ಬಳಿ ಗ್ರೇಡ್ ಸೆಪರೇಟರ್ ನಿರ್ಮಾಣ.

## ವಾಹನ ನಿಲುಗಡೆ ಸಮುಚ್ಚಯಗಳ ನಿರ್ಮಾಣಗಳ ಬಗ್ಗೆ ಗುರುತಿಸಿರುವ ಸ್ಥಳಗಳ ವಿವರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾಣಿಜ್ಯ ಪ್ರದೇಶಗಳಲ್ಲಿ ವಾಹನಗಳ ನಿಲುಗಡೆಗೆ ಸಾಕಷ್ಟು ಸೌಲಭ್ಯವಿಲ್ಲದೇ ಸಾರ್ವಜನಿಕರು ದಿನನಿತ್ಯದ ಕೆಲಸಗಳಿಗಾಗಿ ಹಾಗೂ ಅವಶ್ಯಕ ಸಾಮಾಗ್ರಿಗಳನ್ನು ಖರೀದಿಸಲು ಬರುತ್ತಿದ್ದು, ವಾಹನಗಳ ನಿಲುಗಡೆಗೆ ಸಾಕಷ್ಟು ಸ್ಥಳಾವಕಾಶ ಲಭ್ಯವಿಲ್ಲದೇ ಇರುವ ಕಾರಣ ಹಾಗೂ ರಸ್ತೆಗಳಲ್ಲಿ ಅಡ್ಡಾದಿಡ್ಡಿಯಾಗಿ ವಾಹನಗಳನ್ನು ನಿಲುಗಡೆ .ಮಾಡುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆಟದ ಮೈದಾನ ಇರುವ ಸ್ಥಳಗಳಲ್ಲಿ ಆಟದ ಮೈದಾನಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಆಟದ ಮೈದಾನದ ಕೆಳಗಡೆ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಮುಖ್ಯ ಮಂತ್ರಿಗಳು ವಾಹನ ನಿಲುಗಡೆಗೆ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶದಿಂದ ಅವಶ್ಯಕವಾದ ಸ್ಥಳಗಳನ್ನು ಗುರ್ತಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಹುಮಹಡಿ ವಾಹನ ನಿಲ್ದಾಣ ಸಂಕೀರ್ಣಗಳನ್ನು ನಿರ್ಮಿಸಲು ಜಾಗದಲ್ಲಿ ಹಸ್ತಾಂತರಿಸಲು ಆದೇಶಿಸಿದ್ದರ ಮೇರೆಗೆ ಈ ಕೆಳಕಂಡ ಸ್ವತ್ತುಗಳನ್ನು ಗುರ್ತಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಅಭಿಪ್ರಾಯಪಡಲಾಗಿದೆ.

| | |
|---|---|
| 1 | ರಸೆಲ್ ಮಾರುಕಟ್ಟೆ (ದಕ್ಷಿಣದ ಬಾಗ) |
| 2 | ಅಕ್ಕಿ ತಿಮ್ಮನಹಳ್ಳಿ ಹಾಕಿ ಸ್ಟೇಡಿಯಂ, ಲಾಂಗ್ ಫೋರ್ಡ್ ಟೌನ್<br>(ಆಟದ ಮೈದಾನದ ತಳಭಾಗದಲ್ಲಿ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸುವುದು) |
| 3 | ಬ್ರಿಗೇಡ್ ರಸ್ತೆಯ ತಳಭಾಗದಲ್ಲಿ |
| 4 | ಜಯನಗರ 5ನೇ ಬ್ಲಾಕ್‌ನ ಟೆಲಿಫೋನ್ ಎಕ್ಸ್‌ಚೇಂಜ್ ಮುಂಭಾಗದ ಆಟದ ಮೈದಾನ<br>(ಆಟದ ಮೈದಾನದ ತಳಭಾಗದಲ್ಲಿ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸುವುದು) |
| 5 | ಗರುಡಾ ಮಾಲ್ ಹತ್ತಿರದಲ್ಲಿ ಇರುವ ಪಾಲಿಕೆಯ ನಿವೇಶನ |
| 6 | ಮಲ್ಲೇಶ್ವರಂ ಆಟದ ಮೈದಾನ<br>(ಆಟದ ಮೈದಾನದ ತಳಭಾಗದಲ್ಲಿ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸುವುದು) |
| 7 | ಗಾಂಧಿ ಬಜಾರ್ ಮಾರುಕಟ್ಟೆ |
| 8 | ಕಂಠೀರವ ಕ್ರೀಡಾಂಗಣ, ಮಲ್ಯ ಆಸ್ಪತ್ರೆ ಮುಂಭಾಗ<br>(ಆಟದ ಮೈದಾನದ ತಳಭಾಗದಲ್ಲಿ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸುವುದು–ಸರ್ಕಾರದ ಸ್ವತ್ತು) |
| 9 | ಫ್ರೀಡಂ ಪಾರ್ಕ್ |
| 10 | ನೆಟ್ಟ ಕಲ್ಲಪ್ಪ ಸರ್ಕಲ್<br>(ಆಟದ ಮೈದಾನದ ತಳಭಾಗದಲ್ಲಿ ವಾಹನ ನಿಲುಗಡೆ ಸೌಲಭ್ಯ ಕಲ್ಪಿಸುವುದು) |

**<u>ಕೆರೆಗಳ ಸಮಗ್ರ ಅಭಿವೃದ್ಧಿ:</u>**

ಸರ್ಕಾರದ ಆದೇಶದ ಸಂಖ್ಯೆ:ಈಇಇ 139 ಇಅಔ 2008, ಜಣ :19/04/2010 ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸುಪರ್ಧಿಗೆ ಬಂದಿರುವ 94 ಕೆರೆಗಳ ಪೈಕಿ ಉದ್ದೇಶಿತ ಬಡಾವಣೆಗಳ ವ್ಯಾಪ್ತಿಗೆ ಬರುವ ಹಾಗೂ ಹೊಂದಿಕೊಂಡಂತಿರುವ ಈ ಕೆಳಕಂಡ ಕೆರೆಗಳನ್ನ ಅಭಿವೃದ್ಧಿ ಪಡಿಸಿ ನಿರ್ವಹಣೆ ಮಾಡುವ ಪ್ರಯುಕ್ತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲು ಅಭಿಪ್ರಾಯಪಡಲಾಗಿದೆ.

| | | | |
|---|---|---|---|
| 1. ಮಂಗನಹಳ್ಳಿ | 7. ಹೊಸಕೆರೆಹಳ್ಳಿ | 13. ಅರಕೆರೆ | 19. ಚಿಕ್ಕಬಸ್ತಿ |
| 2. ನೆಲಗದಿರೇನಹಳ್ಳಿ | 8. ದೊಡ್ಡಕಲ್ಲಸಂದ್ರ | 14. ಕೆಂಬೆಟ್ಟನಹಳ್ಳಿ | 20. ಸೂಲೆಕೆರೆ |
| 3. ನರಸಪ್ಪನಹಳ್ಳಿ | 9. ಆವಲಹಳ್ಳಿ | 15. ವಸಂತಪುರ | 21. ಬಿ.ನಾರಾಯಣಪುರ |
| 4 .ಲಿಂಗದೀರನಹಳ್ಳಿ | 10. ಹೊಸಕೆರೆ (ಗಾಂಧಿನಗರ) | 16. ಭೀಮನಕುಪ್ಪೆ | 22. ಚಿಕ್ಕಬೆಟ್ಟಹಳ್ಳಿ |
| 5. ಅಮೃತಹಳ್ಳಿ | 11. ಚುಂಚನಘಟ್ಟ | 17. ಕೆಂಚನಪುರ | 23. ಗರವೆಬಾವಿ ಪಾಳ್ಯ |
| 6. ಗುಬ್ಬಲಾಳ | 12. ಹುಳಿಮಾವು | 18. ಕನ್ನೇನಹಳ್ಳಿ | 24. ಸಿಂಗ ಸಂದ್ರ |
| | | | 25. ಕೋಣನಕುಂಟೆ |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮೇಲ್ಕಂಡ ಯೋಜನೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅನುಷ್ಟಾನಗೊಳಿಸುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ಯೋಜನೆಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ;29–04–2010ರ ಟಿಪ್ಪಣಿ.

**ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು**

**<u>ನಿರ್ಣಯ:-</u> ದಿನಾಂಕ: 29-04-2010ರ ಟಿಪ್ಪಣಿಯನ್ನು ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪುವುದು.**

ಸಂಚಾರಿ ಮಾರ್ಗಗಳ ಅಭಿವೃದ್ಧಿ:

**ಆಯುಕ್ತರ ಟಿಪ್ಪಣಿಯಲ್ಲಿ ನಮೂದಿಸಿರುವ ಪಟ್ಟಿಯಲ್ಲಿರುವ 10 ಸಂಚಾರ ಮಾರ್ಗಗಳಲ್ಲಿ**

**ವಿಷಯದ ಉಪ ಕ್ರಮ ಸಂಖ್ಯೆ: 5ರ ಪ್ರಸ್ತಾವನೆಯನ್ನು ಮುಂದೂಡುವುದು.**

ವಿಷಯದ ಉಪ ಕ್ರಮ ಸಂಖ್ಯೆ: 9, ಸಿಲ್ಕ್ ಬೋರ್ಡ್ ಜಂಕ್ಷನ್ ನಿಂದ ಮೈಸೂರು ರಸ್ತೆಯವರೆಗೆ ಅಗಲೀಕರಣಗೊಳಿಸುವ ಪ್ರಸ್ತಾವನೆಯನ್ನು ಕೈಬಿಡುವುದು.

ವಿಷಯದ ಉಪ ಕ್ರಮ ಸಂಖ್ಯೆ: 7, ಮೈಸೂರು ರಸ್ತೆ, ಸಿರ್ಸಿ ವೃತ್ತದಿಂದ ಬಿಹೆಚ್ಇಎಲ್ ವರೆವಿಗೆ ಮೇಲುಸೇತುವೆ ನಿರ್ಮಾಣ ಮಾಡಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಜ್ಞಾನಭಾರತಿಯವರೆವಿಗೆ ವಿಸ್ತರಿಸುವುದು.

ವಿಷಯದ ಉಪ ಕ್ರಮ ಸಂಖ್ಯೆ: 1, 2, 3, 4, 6, 7, 8, 10 ರ ಸಂಚಾರಿ ಮಾರ್ಗಗಳನ್ನು ಅಭಿವೃದ್ಧಿಗೊಳಿಸಲು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವುದು.

<u>ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.</u>

ಕೆರೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಆಯುಕ್ತರವರ ಟಿಪ್ಪಣಿಯಲ್ಲಿರುವ 25 ಕೆರೆಗಳೊಂದಿಗೆ ಬೈರಸಂದ್ರ ಕೆರೆ, ವಾರ್ಡ್-50ರ ಬಿ. ಚನ್ನಸಂದ್ರ ಕೆರೆ, ವಾರ್ಡ್-57ರ ಕಗ್ಗದಾಸನಪುರ ಕೆರೆ ಮತ್ತು ದೊಡ್ಡನೆಕ್ಕುಂದಿ, (ವಾರ್ಡ್ ನಂ.81) ಕೆರೆಗಳನ್ನು ಸಹ ಸೇರಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಭಿವೃದ್ಧಿಗೊಳಿಸುವ ಸಲುವಾಗಿ ಹಸ್ತಾಂತರಿಸುವುದು.

<u>ಬಹುವಾಹನ ನಿಲ್ದಾಣ ಸಂಕೀರ್ಣ:</u>

ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ಆಟದ ಮೈದಾನಗಳಲ್ಲಿ ಬಹುವಾಹನ ನಿಲುಗಡೆ ಸಮುಚ್ಛಯಗಳ ನಿರ್ಮಾಣದ ಎಲ್ಲಾ ಕಾಮಾಗಾರಿಗಳನ್ನು ಕೈಬಿಡುವುದು.

ಉಳಿದಂತೆ:

ವಿಷಯದ ಉಪ ಕ್ರಮ ಸಂಖ್ಯೆ: 1, ರಸಲ್ ಮಾರಕಟ್ಟೆ –(ದಕ್ಷಿಣ ಭಾಗ) .

ವಿಷಯದ ಉಪ ಕ್ರಮ ಸಂಖ್ಯೆ: 3 ಬ್ರಿಗೇಡ್ ರಸ್ತೆಯ ತಳಭಾಗ

ವಿಷಯದ ಉಪ ಕ್ರಮ ಸಂಖ್ಯೆ: 5 ಗರುಡಮಹಲ್ ಹತ್ತಿರವಿರುವ ಪಾಲಿಕೆಯ ನಿವೇಶನ

ವಿಷಯದ ಉಪ ಕ್ರಮ ಸಂಖ್ಯೆ: 7 ಗಾಂಧಿ ಬಜಾರ್ ಮಾರುಕಟ್ಟೆ

ವಿಷಯದ ಉಪ ಕ್ರಮ ಸಂಖ್ಯೆ: 9 ಸ್ವಾತಂತ್ರ್ಯ ಉದ್ಯಾನವನ

ಈ ಪ್ರದೇಶಗಳಲ್ಲಿ ಬಹು ಮಹಡಿ ವಾಹನ ನಿಲ್ದಾಣ ಸಂಕೀರ್ಣಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ಮಿಸುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

<u>ನಿರ್ಣಯ:-</u> ದಿನಾಂಕ: 29-04-2010ರ ಟಿಪ್ಪಣಿಯನ್ನು ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿದೆ.

ಸಂಚಾರಿ ಮಾರ್ಗಗಳ ಅಭಿವೃದ್ಧಿ:

ಆಯುಕ್ತರ ಟಿಪ್ಪಣಿಯಲ್ಲಿ ನಮೂದಿಸಿರುವ ಪಟ್ಟಿಯಲ್ಲಿರುವ 10 ಸಂಚಾರ ಮಾರ್ಗಗಳಲ್ಲಿ

ವಿಷಯದ ಉಪ ಕ್ರಮ ಸಂಖ್ಯೆ: 5ರ ಪ್ರಸ್ತಾವನೆಯನ್ನು ಮುಂದೂಡುವುದು.

ವಿಷಯದ ಉಪ ಕ್ರಮ ಸಂಖ್ಯೆ: 9, ಸಿಲ್ಕ್ ಬೋರ್ಡ್ ಜಂಕ್ಷನ್ ನಿಂದ ಮೈಸೂರು ರಸ್ತೆಯವರೆಗೆ ಅಗಲೀಕರಣಗೊಳಿಸುವ ಪ್ರಸ್ತಾವನೆಯನ್ನು ಕೈಬಿಡುವುದು.

ವಿಷಯದ ಉಪ ಕ್ರಮ ಸಂಖ್ಯೆ: 7, ಮೈಸೂರು ರಸ್ತೆ, ಸಿರ್ಸಿ ವೃತ್ತದಿಂದ ಬಿಹೆಚ್‌ಇಎಲ್ ವರೆವಿಗೆ ಮೇಲುಸೇತುವೆ ನಿರ್ಮಾಣ ಮಾಡಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಜ್ಞಾನಭಾರತಿಯವರೆವಿಗೆ ವಿಸ್ತರಿಸುವುದು.

ವಿಷಯದ ಉಪ ಕ್ರಮ ಸಂಖ್ಯೆ: 1, 2, 3, 4, 6, 7, 8, 10 ರ ಸಂಚಾರಿ ಮಾರ್ಗಗಳನ್ನು ಅಭಿವೃದ್ಧಿಗೊಳಿಸಲು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವುದು.

<u>ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.</u>

ಕೆರೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಆಯುಕ್ತರವರ ಟಿಪ್ಪಣಿಯಲ್ಲಿರುವ 25 ಕೆರೆಗಳೊಂದಿಗೆ ಬೈರಸಂದ್ರ ಕೆರೆ, ವಾರ್ಡ್-50ರ ಬಿ. ಚನ್ನಸಂದ್ರ ಕೆರೆ, ವಾರ್ಡ್-57ರ ಕಗ್ಗದಾಸನಪುರ ಕೆರೆ ಮತ್ತು ದೊಡ್ಡನೆಕ್ಕುಂದಿ, (ವಾರ್ಡ್ ನಂ.81) ಕೆರೆಗಳನ್ನು ಸಹ ಸೇರಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಭಿವೃದ್ಧಿಗೊಳಿಸುವ ಸಲುವಾಗಿ ಹಸ್ತಾಂತರಿಸುವುದು.

<u>ಬಹುವಾಹನ ನಿಲ್ದಾಣ ಸಂಕೀರ್ಣ:</u>

ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ಆಟದ ಮೈದಾನಗಳಲ್ಲಿ ಬಹುವಾಹನ ನಿಲುಗಡೆ ಸಮುಚ್ಚಯಗಳ ನಿರ್ಮಾಣದ ಎಲ್ಲಾ ಕಾಮಗಾರಿಗಳನ್ನು ಕೈಬಿಡುವುದು.

ಉಲ್ಲೇಖಿಸಿದಂತೆ:

ವಿಷಯದ ಉಪ ಕ್ರಮ ಸಂಖ್ಯೆ: 1, ರಸೆಲ್ ಮಾರುಕಟ್ಟೆ –(ದಕ್ಷಿಣ ಭಾಗ) ,

ವಿಷಯದ ಉಪ ಕ್ರಮ ಸಂಖ್ಯೆ: 3 ಬ್ರಿಗೇಡ್ ರಸ್ತೆಯ ತಳಭಾಗ

ವಿಷಯದ ಉಪ ಕ್ರಮ ಸಂಖ್ಯೆ: 5 ಗರುಡಮಾಲ್ ಹತ್ತಿರವಿರುವ ಪಾಲಿಕೆಯ ನಿವೇಶನ

ವಿಷಯದ ಉಪ ಕ್ರಮ ಸಂಖ್ಯೆ: 7 ಗಾಂಧಿ ಬಜಾರ್ ಮಾರುಕಟ್ಟೆ

ವಿಷಯದ ಉಪ ಕ್ರಮ ಸಂಖ್ಯೆ: 9 ಸ್ವಾತಂತ್ರ್ಯ ಉದ್ಯಾನವನ

ಈ ಪ್ರದೇಶಗಳಲ್ಲಿ ಬಹು ಮಹಡಿ ವಾಹನ ನಿಲ್ದಾಣ ಸಂಕೀರ್ಣಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ಮಿಸುವುದು.

(ಎಸ್. ಕೆ. ನಟರಾಜ)

ಮಹಾಪೌರರು